ಓ ಎಸ್ ನಂ.34/2023

ಡಿ.ಡಬ್ಲ್ಯೂ-1 ಸೋಮನಾಥ ತಂದೆ ಅಂಬಾರಾಯ ಕೋಳ್ಳೂರ

**(ಇಂದು ದಿನಾಂಕಃ 18-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎನ್ ಪಿ ವಕೀಲರಿಂದ.</u>

ನನ್ನ ಅಜ್ಜನ ಹೆಸರು ನಿಂಗಪ್ಪ ಆಗಿರುತ್ತದೆ. ನಿಂಗಪ್ಪರವರಿಗೆ ಅಂಬಾರಾಯ ಮತ್ತು ಬಸಪ್ಪ ಎಂಬ ೨ ಜನ ಮಕ್ಕಳು ಎಂದರೆ ಸರಿ. ನನ್ನ ತಂದೆಯ ಹೆಸರು ಅಂಬಾರಾಯ ಆಗಿರುತ್ತದೆ. ಅಂಬಾರಾಯರವರಿಗೆ ನಾನು, ನಿಂಗಪ್ಪ ಮತ್ತು ಮಹಾದೇವಿ ಎಂಬ ೩ ಜನ ಮಕ್ಕಳು ಎಂದರೆ ಸರಿ. ನನ್ನ ತಂದೆ ಮತ್ತು ಅವರ ಸಹೋದರನಾದ ಬಸಪ್ಪರವರ ನಡುವೆ ಪಾಲು ವಿಭಾಗ ಆಗಿದೆ ಎಂದರೆ ಸರಿ. ನಮ್ಮ ತಂದೆಗೆ ಪಾಲಿನಲ್ಲಿ ಸರ್ವೆ ನಂಬರ ೧೦೦ ರಲ್ಲಿ ೧೧ ಎಕರೆ ಮತ್ತು ಸರ್ವೆ ನಂಬರ ೩೦ ರಲ್ಲಿ ೫ ಎಕರೆ ೧೦ ಗುಂಟೆ ಮತ್ತು ಸರ್ವೆ ನಂಬರ ೩೧ ರಲ್ಲಿ ೭ ಎಕರೆ ಮೇಲೆ ಗುಂಟೆ ಜಮೀನು ಬಂದಿರುತ್ತದೆ. ನಮ್ಮ ಕಾಕಾ ಬಸಪ್ಪರವರ ಪಾಲಿಗೆ ಸರ್ವೆ ನಂಬರ ೧೦೭ ರಲ್ಲಿ ೯ ಎಕರೆ ಮೇಲೆ ಗುಂಟೆ ಜಮೀನು ಮತ್ತು ಸರ್ವೆ ನಂಬರ ೩೧ ರಲ್ಲಿ ೭ ಎಕರೆ ಮೇಲೆ ಗುಂಟೆ ಜಮೀನು ಮತ್ತು ಸರ್ವೆ ನಂಬರ ೩೦ ರಲ್ಲಿ ೪ ಎಕರೆ ಜಮೀನು ಬಂದಿರುತ್ತದೆ.

೨. ಸರ್ವೆ ನಂಬರ ೧೦೦ ರಲ್ಲಿ ನಮ್ಮ ಕಾಕ ಬಸಪ್ಪರವರಿಗೆ ಯಾವುದೆ ಪಾಲು ಹೋಗಿರುವುದಿಲ್ಲ. ಸದರಿ ಪಾಲು ಆಗಿ ಎಷ್ಟು ವರ್ಷಗಳಾಗಿವೆ ಎಂದು ಹೇಳಲು ನನಗೆ ನೆನಪಿಲ್ಲ. ನಾನು ಮೇಲೆ ಹೇಳಿದ ಎಲ್ಲಾ ಆಸ್ತಿಗಳು ನಮ್ಮ ಹಿರಿಯರಿಂದ ಬಂದಿರುತ್ತವೆ ಎಂದರೆ ಸರಿ. ನಾನು ಮತ್ತು ನನ್ನ ಸಹೋದರರಾದ ನಿಂಗಪ್ಪ ಮತ್ತು ಸಹೋದರಿಯಾದ ಮಹಾದೇವಿ ವಿಭಾಗ ಮಾಡಿಕೊಂಡಿರುತ್ತೇವೆ. ನನಗೆ ಸರ್ವೆ ನಂಬರ ೩೧ ರಲ್ಲಿ ೭ ಎಕರೆ

ಮೇಲೆ ಗುಂಟೆ ಜಮೀನು ನನ್ನ ಪಾಲಿಗೆ ಬಂದಿರುತ್ತದೆ. ಸರ್ವೆ ನಂಬರ ೧೦೦ ರಲ್ಲಿ ನನ್ನ ಸಹೋದರನಾದ ನಿಂಗಪ್ಪರವರಿಗೆ ೭ ಎಕರೆ ಮೇಲೆ ಗುಂಟೆ ಜಮೀನು ಪಾಲಿಗೆ ಬಂದಿರುತ್ತದೆ. ನನ್ನ ಸಹೋದರಿಯಾದ ಮಹಾದೇವಿರವರಿಗೆ ಯಾವುದೆ ಜಮೀನು ಪಾಲಿಗೆ ಹೋಗಿರುವುದಿಲ್ಲ. ಆ ರೀತಿ ನಮ್ಮ ನಡುವೆ ಪಾಲುವಿಭಾಗ ಆದ ಕುರಿತು ತೋರಿಸಲು ನಾನು ಯಾವುದೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಂಗಪ್ಪರವರ ಪಾಲಿಗೆ ಜಮೀನು ಹೋದ ಕುರಿತು ತೋರಿಸಲು ಪಹಣಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನಮ್ಮ ನಡುವೆ ಯಾವುದೇ ವಿಭಾಗ ಆಗದೆ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.